**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 336/2024
ಪಿಡಬ್ಲು :10 ಸಿಡಬ್ಲು :12

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀ.ಮುರ್ತೋಜಿ ಮುಲ್ಲಾ |
| ತಂದೆಯ ಹೆಸರು | : | ಶ್ರೀ.ಬಾಬುಸಾಬ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ್ತವ್ಯ | : | ಯಕ್ಕೇರಿ ಗ್ರಾಮ, ತಾಲೂಕುಃ ಸವದತ್ತಿ |
| ದಿನಾಂಕ | : | 17-03-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

(1ನೇ ಆರೋಪಿ ಮತ್ತು 5ನೇ ಆರೋಪಿತರು ನ್ಯಾಯಾಂಗ ಬಂಧನದಲ್ಲಿದ್ದು ವಿಡಿಯೋ ಕಾನ್ಪರೆನ್ಸ ಮುಖಾಂತರ ಹಿಂಡಲಗಾ ಕಾರಾಗೃಹ, ಬೆಳಗಾವಿಯಿಂದ ವಿಚಾರಣೆಗೆ ಹಾಜರುಪಡಿಸಿಕೊಳ್ಳಲಾಯಿತು. ಆರೋಪಿಗೆ ನ್ಯಾಯಾಲಯದ ಚಿತ್ರಣ ಸ್ಪಷ್ಟವಾಗಿ ಕಾಣಿಸುತ್ತಿದೆಯೇ ಮತ್ತು ಧ್ವನಿ ಸ್ಪಷ್ಟವಾಗಿ ಕೇಳಿಸುತ್ತಿದೆಯೇ ಎಂದು ಆರೋಪಿತರಿಂದ ಖಾತರಿಪಡಿಸಿಕೊಂಡು ವಿಚಾರಣೆಯನ್ನು ವಿಡಿಯೋ ಕಾನ್ಪರೆನ್ಸ ಮುಖಾಂತರ ಆರೋಪಿತರ ಪರ ವಕೀಲರ ಮತ್ತು ಸರ್ಕಾರಿ ವಕೀಲರ ಸಮಕ್ಷಮ ತೆರೆದ ನ್ಯಾಯಾಲಯದಲ್ಲಿ ತೆಗೆದುಕೊಳ್ಳಲಾಯಿತು.)

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 9 ಯಲ್ಲಪ್ಪ ಭಜಂತ್ರಿ ನನಗೆ ಗೊತ್ತಿರುವುದಿಲ್ಲ. ಚಾಸಾಃ 9 ರವರು ನನ್ನನ್ನು ಎಂದಿಗೂ ಬೆಳಗಾವಿಗೆ ಕರೆದುಕೊಂಡು ಬಂದಿರುವುದಿಲ್ಲ. 1ನೇ ಆರೋಪಿ ರಫೀಕ ಬೇಪಾರಿ ನನಗೆ ಗೊತ್ತಿರುವುದಿಲ್ಲ. ಈ ಪ್ರಕರಣದಲ್ಲಿ ಪೋಲೀಸರು ನನ್ನನ್ನು ವಿಚಾರಿಸಿ, ನನ್ನ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ, ಹೇಳಿಕೆಯನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).**

<u>**ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದ**</u>

ಚಾಸಾಃ 9 ಯಲ್ಲಪ್ಪ ನನ್ನ ಸ್ನೆಹೀತ ಮತ್ತು ನನ್ನ ಸಹಪಾಟಿ ಎನ್ನುವುದು ಸರಿಯಲ್ಲ. ದಿನಾಂಕಃ 15-04-2024 ರಂದು " ಬೆಳಿಗ್ಗೆ 08:00 ಗಂಟೆಗೆ ನನ್ನ ಗೆಳೆಯ ಯಲ್ಲಪ್ಪ ಭಜಂತ್ರಿ ನನಗೆ ಪೋನ ಮಾಡಿ ನನಗೆ ಬೆಳಗಾವಿಗೆ ಹೋಗೋಣ ಬಾ ಎಂದು ಕರೆದನು, ಆಗ ನಾನು ನನ್ನ ಕೆಲಸ ಬಹಳ ಇದೆ ನೀನು ಹೋಗಿ ಬಾ ಎಂದು ಹೇಳಿದನು, ಆಗ ಅವನು ನನಗೆ ಬರಲೇಬೇಕು ಎಂದು ಹೇಳಿದ್ದರಿಂದ, ನನಗೆ ಬರಲು ಆಗುವುದಿಲ್ಲ ಎಂದು ನಾನು ಪೋನ ಕಟ್ ಮಾಡಿದೆನು ಎನ್ನುವುದು ಸರಿಯಲ್ಲ. ಬೆಳಿಗ್ಗೆ 09:00 ಗಂಟೆ ಸುಮಾರಿಗೆ ನಾನು ಮನೆಯಲ್ಲಿ ಊಟ ಮಾಡುತ್ತಿರುವಾಗ ಯಲ್ಲಪ್ಪ ನಮ್ಮ ಮನೆಗೆ ಬೈಕ್ ತೆಗೆದುಕೊಂಡು ಬಂದನು, ಅವನು ನನಗೆ ಆಶ್ರಮಕ್ಕೆ ಹೋಗಿ ಬರೋಣ ಎಂದು ಹೇಳಿ ಕರೆದನು, ನನಗೆ ಬಹಳ ಕೆಲಸ ಇದೆ ನಾನು ಬರುವುದಿಲ್ಲ ಎಂದು ಹೇಳಿದೆನು, ಆದರೂ ಅವನು ನಾನು ನಿನ್ನ ಮನೆ ತನಕ ಬಂದಿರುತ್ತೇನೆ ನೀನು ನನ್ನ ದೊಸ್ತ ಎಂದು ಕರೆದನು, ಆಗ ನಾನು ಅವನಿಗೆ ನೀನು ನನಗೆ ಜಲ್ದಿ ತಂದು ಬಿಡಬೇಕು ನನಗೆ ಕೆಲಸ ಇದೆ ಎಂದು ಹೇಳಿದೆನು, ಆತನು ಕಾರು ಬಾಡಿಗೆಗೆ ಮಾಡಿಕೊಂಡು ಬಂದಿದ್ದು, ಮಧ್ಯಾಹ್ನ 12:00 ರಿಂದ 01:00 ಗಂಟೆ ಒಳಗಡೆ ಕರೆದುಕೊಂಡು ಬಂದು ಬಿಡುತ್ತೇನೆ ಎಂದು ಹೇಳಿದನು, ಆಗ ನಾನು ಮತ್ತು ಯಲ್ಲಪ್ಪ ಕಾರ ಗಾಡಿಯಲ್ಲಿ ಕುಳಿತು ಆಶ್ರಮದಲ್ಲಿ ನಮ್ಮ ಹೆಣ್ಣು ಮಕ್ಕಳು ಇದ್ದಾರೆ ಹೋಗಿ ಮಾತನಾಡಿಸಿ ಬರೋಣ ಎಂದು ಅವರ ಜೊತೆ ಜಗಳವಾಗಿದೆ ಎಂದು ಹೇಳಿದನು.

2. ನಾನು ಬೆಳಗಾವಿ ಆಶ್ರಮ ಕಡೆಗೆ ಒಂದು ಬಿಲ್ಡಿಂಗ್ ಕಡೆಗೆ ಹೋಗಲು ಅಲ್ಲಿ ಒಣಗಿ ಹಾಕಿದ್ದ ಬಟ್ಟೆಗನ್ನು ನೋಡಿ ಯಲ್ಲಪ್ಪ ಇತನು ಅವುಗಳು ತನ್ನ ಹೆಂಡತಿ ಬಟ್ಟೆ ಎಂದು ಗುರುತಿಸಿ, ಗಾಡಿಯಿಂದ ಯಲ್ಲಪ್ಪ ಒಂದು ಮುಸ್ಲಿಂ ಅಜ್ಜನಿಗೆ ಒಂದು ಮೊಬೈಲ್ ಪೋನನಿಂದ ಫೊಟೋ ತೋರಿಸಿದನು ಅವರು ಹಿಂದಿಯಲ್ಲಿ ಏನು ಮಾತನಾಡುತ್ತಿದ್ದಾರೆ ನನಗೆ ತಿಳಿಯುವುದಿಲ್ಲ, ನೀನೇ ಮಾತನಾಡಿ ಬಾ ಎಂದು ಹೇಳಿ ಕರೆದನು. ನಾನು ಕಾರನಿಂದ ಇಳಿದು ಬರುವಷ್ಟರಲ್ಲಿ ಆ ವ್ಯಕ್ತಿ ಹೊರಟು ಹೋಗಿದ್ದನು. ನಂತರ ನಾನು ಮೇಲೆ ಹೋಗಿ ಬಾಗಿಲು ತಟ್ಟಿದಾಗ ಯಲ್ಲಪ್ಪನ ಹೆಂಡತಿ ಬಾಗಿಲು ತೆಗೆದಳು, ಆಕೆಯೊಂದಿಗೆ ಇನ್ನೊಬ್ಬ ಮಹಿಳೆ ಇದ್ದಳು ಎನ್ನುವುದು ಸರಿಯಲ್ಲ. ರಫೀಕ ಎನ್ನುವವರು ಆಕೆಯನ್ನು ಕರೆದುಕೊಂಡು ಅಲ್ಲಿ ಇರಿಸಿದ್ದಾನೆ ಎಂದು ಯಲ್ಲಪ್ಪನ ಹೆಂಡತಿ ಹೇಳಿದಳು ಎನ್ನುವುದು ಸರಿಯಲ್ಲ. ಆ ಸಮಯದಲ್ಲಿ ಯಲ್ಲಪ್ಪನ ಹೆಂಡತಿಯೊಂದಿಗೆ ಇದ್ದ ಹೆಣ್ಣು ಮಗಳ ಪೋನನ್ನು ಯಲ್ಲಪ್ಪ ಕಸಿದುಕೊಂಡನು ಎನ್ನುವುದು ಸರಿಯಲ್ಲ. ನಾನು ಕೆಳಗೆ ಬಂದ ನಂತರ ಯಲ್ಲಪ್ಪ ಮತ್ತು ಆತನ ಹೆಂಡತಿ ಲಗೇಜ ತೆಗೆದುಕೊಂಡು ಕೆಳಗೆ ಬಂದರು. ನಂತರ ನಾವು ಸಂಕೇಶ್ವರ ಬಸ್ಸ ನಿಲ್ದಾಣಕ್ಕೆ ಬಂದು ನನಗೆ ಇಳಿಸಿ, ರೂ.500/- ಕೊಟ್ಟರು, ಮುಂದೆ ಅವರು ಪ್ರಯಾಣ ಮಾಡಿದರು, ನಾನು ವಾಪಸ್ಸು ಮನೆಗೆ ಬಂದು ಇಳಿದೆನು ಎನ್ನುವುದು ಸರಿಯಲ್ಲ. ಆ ದಿನ ರಾತ್ರಿ 10:30 ರಿಂದ 10:40 ರ ಸಮಯದಲ್ಲಿ 1ನೇ ಆರೋಪಿ ರಫೀಕ ಮತ್ತು 4-5 ಜನರು ಕೂಡಿ ನಮ್ಮ ಮನೆಗೆ ಬಂದರು, ಅವರ ಮೊಬೈಲನಲ್ಲಿ ಇದ್ದ ಸಿ.ಸಿ ಕ್ಯಾಮರಾ ಫೂಟೇಜ ನನಗೆ ತೋರಿಸಿ, ಬೆಳಗಾವಿಯ ಮನೆ ಮುಂದೆ ನಿಂತ್ತಿದ್ದು ಇತ್ತು. " ಎಂದು ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಸದರಿ ಹೇಳಿಕೆ ಭಾಗವನ್ನು ನಿಪಿ-35 ಎಂದು ಗುರುತಿಸಲಾಯಿತು.

3. ಆರೋಪಿತರು ಅಲ್ಲಿಂದ ಲೋಕಾಪೂರಕ್ಕೆ ಬಂದಾಗ ಗಾಡಿ ಬರುತ್ತದೆ ಎಂದು ಲೋಕಾಪೂರಕ್ಕೆ ನಿಂತೆವು, ನಂತರ ನಾವು ಅಲ್ಲಿಂದ ಬೆಳಗಾವಿಗೆ ಹೋದೆವು ನನಗೆ

ಲಾಡ್ಜನಲ್ಲಿ ಇಟ್ಟಿದ್ದರು, ಬೆಳಗಾವಿ ರಾಮದುರ್ಗಕ್ಕೆ ಬಂದೆವು. " ಎಂದು ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಸದರಿ ಹೇಳಿಕೆ ಭಾಗವನ್ನು ನಿಪಿ–35 [ಎ] ಎಂದು ಗುರುತಿಸಲಾಯಿತು.

4. ನಾನು ನಿಪಿ –35 ಮತ್ತು 35 (ಎ) ಪ್ರಕಾರ ಹೇಳ್ದದರು ಸಹ ಆರೋಪಿ ನಮ್ಮ ಧರ್ಮದವನು ಮತ್ತು ನನ್ನ ಸ್ನೇಹಿತನಾಗಿದ್ದರಿಂದ ಅವನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀಮತಿ.ಎಸ್.ಬಿ.ಪಿ ವಕೀಲರಿಂದ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ .

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.